4.00 P.M.

(ಸದನವು ಪುನಃ 4.12ಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು, (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ಅ) ವಿಷಯ :ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ತುಂಬಲು ಆಗ್ರಹಿಸಿ ಹೊರ್ತಿ ಗ್ರಾಮದಲ್ಲಿ ನಡೆಯುತ್ತಿರುವ ಸತ್ಯಾಗ್ರಹದ ಬಗ್ಗೆ.

ಶ್ರೀ ಎಂ.ಬಿ. ಪಾಟೀಲ್ (ತಿಕೋಟ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳನ್ನು ತುಂಬುವ ವಿಚಾರದಲ್ಲಿ ನಮ್ಮ ಹೊರ್ತಿ ಗ್ರಾಮದಲ್ಲಿ ಸುಮಾರು 17 ದಿವಸಗಳಿಂದ ಸತತವಾಗಿ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಅದಲ್ಲದೇ, ಇವತ್ತು ಎಲ್ಲಾ ತಾಲ್ಲೂಕುಗಳಲ್ಲಿಯೂ ಆಲಮಟ್ಟಿ, ನಾರಾಯಣಪುರ ಮತ್ತು ಭೀಮಾ ಜಲಾಶಯಗಳಿಂದ ಬಿಜಾಪುರ ಜಿಲ್ಲೆಯಲ್ಲಿನ ಎಲ್ಲ ಕೆರೆಗಳನ್ನು ತುಂಬುವಂಥ ಒಂದು ಯೋಜನೆಯ ಅನುಷ್ಠಾನದ ಸಲುವಾಗಿ, ಅದರ ಅನುಮೋದನೆಯ ಸಲುವಾಗಿ ಕಳೆದ 17 ದಿವಸಗಳಿಂದ ಹೊರ್ತಿ ಗ್ರಾಮದಲ್ಲಿ ಈ ಒಂದು ಸತ್ಯಾಗ್ರಹ ನಡೆಯುತ್ತಿದೆ. ನಾನು ಇವತ್ತಿನ ದಿವಸ ತಮ್ಮ ಮೂಲಕ ಸಣ್ಣ ನೀರಾವರಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಬೇಗನೆ ಈ ಒಂದು ಯೋಜನೆಗೆ ಅನುಮೋದನೆ ನೀಡಬೇಕು, ಅದನ್ನು ಅನುಷ್ಠಾನಗೊಳಿಸಬೇಕು ಮತ್ತು 17 ದಿವಸಗಳಿಂದ ಈ ಸತ್ಯಾಗ್ರಹವನ್ನು ಕೈಗೊಂಡಿದ್ದರೂ ಇದುವರೆಗೂ ಅಲ್ಲಿಗೆ ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಸಣ್ಣ ನೀರಾವರಿ ಸಚಿವರಾಗಲೀ ಭೇಟಿ ಕೊಟ್ಟಿಲ್ಲ. ಈಗಲಾದರೂ ಅವರ ಮನವೊಲಿಸಿ ಸತ್ಯಾಗ್ರಹವನ್ನು ವಾಪಸ್ಸು ಪಡೆಯುವಂತೆ ಮಾಡಲು ಸರ್ಕಾರ ಕ್ರಮವನ್ನು ಕೈಗೊಳ್ಳಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಎಂ.ಬಿ. ಪಾಟೀಲ್‌ರವರು ಪ್ರಸ್ತಾಪ ಮಾಡಿದ ಹಾಗೆ ಹೊರ್ತಿ ಗ್ರಾಮದಲ್ಲಿ ಸಾವಿರಾರು ಜನ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಅವರಿಗೆ ಬೆಂಬಲವಾಗಿ ವಿದ್ಯಾರ್ಥಿಗಳು ಕೂಡ ಸುಮಾರು 2–3 ದಿವಸಗಳಿಂದ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದಾರೆ. ಅದರಿಂದ ಕಾನೂನು ವ್ಯವಸ್ಥೆ ಕೆಡತಕ್ಕಂಥ ಸಾಧ್ಯತೆ ಇದೆ. ಎರಡನೆಯದಾಗಿ, ಈ ಹಿಂದೆ ಎಂ.ಬಿ. ಪಾಟೀಲ್‌ರವರ ನೇತೃತ್ವದಲ್ಲಿ, ಸ್ಥಳೀಯ ಕೆಲವು retired engineers, professors ಎಲ್ಲರೂ ಸೇರಿ ಕೆರೆಗಳನ್ನು ತುಂಬಿಸತಕ್ಕಂಥಾದ್ದಕ್ಕೆ ಒಂದು Action Plan ತಯಾರು ಮಾಡಿ ಕೊಟ್ಟಿದ್ದು ಅದು ಸರ್ಕಾರದ ಹತ್ತಿರ ಬಂದಿತ್ತು. ಸರ್ಕಾರದವರು ಇನ್ನು ಸಣ್ಣ ನೀರಾವರಿ ಯೋಜನೆಯಡಿಯಲ್ಲಾದರೂ ತೆಗೆದುಕೊಳ್ಳಬೇಕು, ಇಲ್ಲವೆಂದರೆ ಕೃಷ್ಣಾ ಭಾಗ್ಯ ಜಲ ನಿಗಮದಿಂದ ಹಣವನ್ನು ಕೊಟ್ಟು ಕಾಲುವೆಗಳನ್ನು ತೆಗೆದು ನೀರನ್ನು ತುಂಬಿಸತಕ್ಕಂಥಾದ್ದು ಅಥವಾ ಕೆಲವು ಭಾಗಗಳಲ್ಲಿ lift irrigation ಮಾಡುವಂಥಾದ್ದನ್ನಾದರೂ ಮಾಡಬೇಕು ಎಂದು, ಅದನ್ನು ಪರಿಶೀಲನೆಗಾಗಿ department ಗೆ ಕಳುಹಿಸಿತ್ತು. ಅದನ್ನು ದೊಡ್ಡ ನೀರಾವರಿ ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೋ ಅಥವಾ ಸಣ್ಣ ನೀರಾವರಿ

ಯೋಜನೆಯವರಿಗೆ ಕೊಟ್ಟಿದ್ದಾರೋ ಗೊತ್ತಾಗಲಿಲ್ಲ. ಆ ಭಾಗ ಅತ್ಯಂತ ಹಿಂದುಳಿದಂಥ ಭಾಗ ಮತ್ತು ತಮಗೆ ಗೊತ್ತಿದೆ, ವಿಶೇಷವಾಗಿ ಬಿಜಾಪುರ ಅತ್ಯಂತ ಬಹಳ scanty rainfall ಆಗತಕ್ಕಂಥ ಪ್ರದೇಶ. ಹಾಗಾಗಿ ಅಲ್ಲಿ ಕೆಲವು barrage ಗಳನ್ನು ಕಟ್ಟಿಸಿದರೆ ಅದು river ಅಕ್ಕಪಕ್ಕದಲ್ಲಿರತಕ್ಕಂಥ ಜಮೀನುಗಳಿಗೆ ಮಾತ್ರ ಅನುಕೂಲವಾಗುತ್ತದೆಯೇ ಹೊರತಾಗಿ ಅದರಿಂದ ಕೆರೆಗಳಿಗೆ ಅನುಕೂಲವಾಗುವುದಿಲ್ಲ. ಆ ದೃಷ್ಟಿಯಿಂದ ಅವರು ಮತ್ತು ಬಿಜಾಪುರದ ಎಲ್ಲಾ ಮುಖಂಡರು ಸೇರಿ ಒಂದು action plan ಅನ್ನು ಮಾಡಿದ್ದಾರೆ. ಜನ ಇವತ್ತು ಸಾಕಷ್ಟು agitation ಮಾಡಿ, ಸತ್ಯಾಗ್ರಹ ಮಾಡಿ, ಸರ್ಕಾರಕ್ಕೆ ಕೂಡ ಮನವಿಗಳನ್ನು ಕೊಡುತ್ತಿದ್ದಾರೆ. ಈಗ ಇಲ್ಲಿ ಈಶ್ವರಪ್ಪನವರೂ ಇದ್ದಾರೆ. ಇದನ್ನು ಕೃಷ್ಣಾ ಭಾಗ್ಯ ಜಲ ನಿಗಮದ ಅಡಿಯಲ್ಲಾದರೂ ತೆಗೆದುಕೊಂಡು ಅಥವಾ lift irrigation ನಲ್ಲಾದರೂ ತೆಗೆದುಕೊಂಡು ಕೆರೆಗಳನ್ನು ತುಂಬತಕ್ಕಂಥದ್ದನ್ನಾದರೂ ಮಾಡಬೇಕು, ಇಲ್ಲವೆಂದರೆ ನಬಾರ್ಡ್ ಅಡಿಯಲ್ಲಿ ಹಣವನ್ನು ಕೊಟ್ಟಾದರೂ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ನಾವು ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳದೇ ಹೋದರೆ, ಅದು ಬೇರೆ ಕಡೆಗೆ ಹೋಗುವ ಸಾಧ್ಯತೆ ಕೂಡ ಇರುತ್ತದೆ. ಅದಕ್ಕಾಗಿ ದಯವಿಟ್ಟು ಆ ಸತ್ಯಾಗ್ರಹಿಗಳನ್ನು ಎಬ್ಬಿಸತಕ್ಕಂಥ ಕೆಲಸ ಮಾಡಬೇಕು. ಈಗ ವಿದ್ಯಾರ್ಥಿಗಳೂ ಈ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದಾರೆ. ಇದರಿಂದ ಅವರ ವಿದ್ಯಾಭ್ಯಾಸವೂ ಕೂಡ ಕೆಡುತ್ತದೆ. ಹಾಗಾಗಿ, ಇದಕ್ಕೆ ಒಂದು ಇತಿಶ್ರೀ ಹಾಡಬೇಕಾದರೆ, ಸರ್ಕಾರದ ವತಿಯಿಂದ ಅಲ್ಲಿಗೆ ಹೋಗಿ ಇದಕ್ಕೆ ಏನಾದರೊಂದು ಉಪಾಯವನ್ನು ಕಂಡುಹಿಡಿದು, ಅವರಿಗೆ ಸಹಾಯ ಮಾಡತಕ್ಕಂಥ ಕೆಲಸ ಮಾಡಬೇಕು ಎಂದು ನಾನು ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ.

ಶ್ರೀ ಮುರುಗೇಶ್ ನಿರಾಣಿ (ಬೀಳಗಿ) : ಮಾನ್ಯ ಅಧ್ಯಕ್ಷರೇ, ಬಾಗಲಕೋಟೆ ಜಿಲ್ಲೆಯ ಬೀಳಗಿ ವಿಧಾನಸಭಾ ಕ್ಷೇತ್ರದಲ್ಲೂ ಸಹ ಬರಗಾಲದಿಂದ ಸಾಕಷ್ಟು ಕೆರೆಗಳು ಖಾಲಿಯಾಗಿರುವುದರಿಂದ ಆ ಕೆರೆಗಳನ್ನು ತುಂಬಿಸಲಿಕ್ಕೆ ಪೂರ್ವಭಾವಿಯಾಗಿ ಒಂದು ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿಯಾಗಿದೆ. ಅದರ ಜೊತೆಗೆ, ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ ಬರುವಂಥ 12 ಪ್ರಮುಖವಾದ ಕೆರೆಗಳನ್ನು ತುಂಬಿಸಲು ಸಹ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದನ್ನು ಸಹ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೇ, ಇವತ್ತು ಬೆಳಿಗ್ಗೆ ತಾನೇ ಸಣ್ಣ ನೀರಾವರಿ ಸಚಿವರೂ ಆದ ಉಪ ಮುಖ್ಯಮಂತ್ರಿಗಳ ಹತ್ತಿರ ನಾನು ಚರ್ಚೆಯನ್ನು ಮಾಡಿದ್ದೇನೆ. ಹಿರಿಯ ಶಾಸಕರಾದಂಥ ಮಲ್ಲಿಕಾರ್ಜುನ ಖರ್ಗೆಯವರು, ಎಂ.ಬಿ. ಪಾಟೀಲ್ ರವರು ಮತ್ತು ಮುರುಗೇಶನ್ ನಿರಾಣಿಯವರು ಪ್ರಸ್ತಾಪ ಮಾಡಿರುವ ವಿಷಯದ ಬಗ್ಗೆ 7ನೇ ತಾರೀಖು ನಾನು ಬಿಜಾಪುರ ಜಿಲ್ಲೆಗೆ ಬರುತ್ತಿದ್ದೇನೆ. ಆಗ ಬಿಜಾಪುರ ಮತ್ತು ಬಾಗಲಕೋಟೆ ಈ ಎರಡೂ ಜಿಲ್ಲೆಗಳ ಶಾಸಕರು, ಸಂಸದರು ಮತ್ತು ಅಲ್ಲಿ

ಅನೇಕ ದಿನಗಳಿಂದ ಧರಣಿ ಮಾಡುತ್ತಿರುವ ಹೋರಾಟಗಾರರನ್ನು ಕೂರಿಸಿಕೊಂಡು ಚರ್ಚೆ ಮಾಡುತ್ತೇನೆ. ಈ ಒಂದು ಸಮಸ್ಯೆ ಇವತ್ತಿನದಲ್ಲ, ಇದು ಬಹಳ ವರ್ಷಗಳ ಸಮಸ್ಯೆ. ಅದನ್ನು ಯಾವ ರೀತಿ ಪರಿಹಾರ ಮಾಡಬೇಕು ಎನ್ನುವುದರ ಬಗ್ಗೆ ನಾನು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. 7ನೇ ತಾರೀಖು ನಾನು ಅಲ್ಲಿಗೆ ಹೋಗಿ, ಅವರನ್ನೆಲ್ಲಾ ಕೂರಿಸಿಕೊಂಡು, ಅದನ್ನು ಒಂದು ರೂಪಕ್ಕೆ ತರುವಂಥ ಯೋಜನೆಯನ್ನು ಸರ್ಕಾರ ಮಾಡುತ್ತಿದೆ. ತಮಗೆ ಗೊತ್ತಿರಬಹುದು, ಬೀದರ್‌ನಲ್ಲಿ ಅನೇಕ ವರ್ಷಗಳಿಂದ ಗುತ್ತಿ ಬಸವಣ್ಣ ಸಮಸ್ಯೆಯೂ ಇತ್ತು. ಆ ಸಮಸ್ಯೆಯನ್ನು ನಾವು ಈಗಾಗಲೇ ಪರಿಹಾರ ಮಾಡಿ, ಸಚಿವ ಸಂಪುಟದಲ್ಲಿ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ, ಆ ಯೋಜನೆಯನ್ನು ಆದಷ್ಟು ಬೇಗ ಪ್ರಾರಂಭ ಕೂಡ ಮಾಡುತ್ತೇವೆ. ಈಗ ನಮ್ಮ ಸದಸ್ಯರು ಪ್ರಸ್ತಾಪ ಮಾಡಿರುವುದರ ಬಗ್ಗೆಯು ಕೂಡ ಸರ್ಕಾರ ಗಮನ ಕೊಟ್ಟು, ಖಂಡಿತವಾಗಿ ಅದನ್ನು ನಾವು ಒಂದು ರೂಪಕ್ಕೆ ತರುತ್ತೇವೆ ಎನ್ನುವುದು ತಮ್ಮ ಮುಖಾಂತರ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ : ತಾವು 7ನೇ ತಾರೀಖು meeting ಅನ್ನು ಕರೆದಿದ್ದೀರಿ. ಆದರೆ, ಈಗಾಗಲೇ ಅಲ್ಲಿ ಸತ್ಯಾಗ್ರಹ ಕುಳಿತಿರುವಂಥ ಜನರಿಗೆ ತಾವು ಒಂದು ಸಂದೇಶವನ್ನು ಕೊಡಬೇಕಾಗುತ್ತದೆ. ಅವರು ಸತ್ಯಾಗ್ರಹವನ್ನು ವಾಪಸ್ಸು ಪಡೆದುಕೊಳ್ಳಲು ಒಂದು ವಿನಂತಿಯನ್ನು ಸಹ ತಾವು ಈ ಸದನದ ಮೂಲಕ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಖಂಡಿತವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ, ಆ ಒಂದು ಸಮಸ್ಯೆಯನ್ನು ಪರಿಹಾರ ಮಾಡುವ ದಿಕ್ಕಿನಲ್ಲಿ ಸರ್ಕಾರ ಖಂಡಿತವಾಗಿ ಗಮನ ಕೊಡುತ್ತದೆ. ನಾನು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ, ಅಲ್ಲಿ ಯಾರು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ, ದಯವಿಟ್ಟು ಅವರು ತಕ್ಷಣ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಲಿ. ಅವರಿಗೆ ತೃಪ್ತಿ ಬರುವ ರೀತಿಯಲ್ಲೇ 7ನೇ ತಾರೀಖು ಬಂದಾಗ, ಕುಳಿತುಕೊಂಡು ಯೋಚನೆ ಮಾಡಿ ಯೋಜನೆಯನ್ನು ತಯಾರು ಮಾಡಿಕೊಂಡು ಬರುತ್ತೇನೆ. ಅದಕ್ಕೊಂದು ರೂಪ ತರುತ್ತೇನೆ. ಯಾರು ಧರಣಿ ಮಾಡುತ್ತಿದ್ದಾರೆ, ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಆ ಹೋರಾಟಗಾರರಿಗೆ ನಾನು ಮನವಿ ಮಾಡುತ್ತೇನೆ, ಅವರು ಅವರ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಇವತ್ತು ಸದನದ ಮೂಲಕ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ (ಮುದ್ದೇಬಿಹಾಳ) : ಇಲ್ಲಿಯವರೆಗೆ ಮಂತ್ರಿಗಳು ತಮ್ಮ ಉತ್ತರದಲ್ಲಿ ನಾನು ಮುಂದೆ ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವಂಥ ಮಾತನ್ನು ಹೇಳಿದರು. ಈಗಾಗಲೇ ಇದರ ಬಗ್ಗೆ ಸಾಕಷ್ಟು ಇಲಾಖೆವಾರು ಚರ್ಚೆಯಾಗಿದೆ. ಒಂದು ಉದಾಹರಣೆಗೆ ಹೇಳಬೇಕಾದರೆ, ಮುದ್ದೇಬಿಹಾಳದಲ್ಲಿ ಒಂದು pilot project ಅನ್ನು ಮಾಡಿ

ಕೇವಲ ಸುಮಾರು 9 ಕೋಟಿ ರೂಪಾಯಿಗಳಲ್ಲಿ ಸುಮಾರು 13 ಕೆರೆಗಳು ತುಂಬತಕ್ಕಂಥ ಒಂದು ಯೋಜನೆಯನ್ನು ಸಿದ್ಧಪಡಿಸಲಾಗಿತ್ತು. ಮಂಜೂರಾತಿ ಕೊಡುವ ಬದಲಾಗಿ ಇದನ್ನು B scheme ನಲ್ಲಿ fail off ಯೋಜನೆಯಲ್ಲು use ಮಾಡಿಕೊಂಡು ಇದಕ್ಕೆ ನಾವು ಹಣ ತುಂಬಬಹುದು. ಇದಕ್ಕೇಕೆ ನಾವು 9 ಕೋಟಿ ರೂಪಾಯಿ ಖರ್ಚು ಮಾಡಬೇಕು ಅನ್ನುವುದಕ್ಕೋಸ್ಕರ ಅದನ್ನು ಮತ್ತೆ cold storage ಗೆ ಹಾಕಿದ್ದಾರೆ. ಈ ತೀರ್ಮಾನಗಳು ಯಾವ ಹಂತದಲ್ಲಿ ಆಗುತ್ತಿವೆ? ಯಾಕೆ ಈ ತರಹವಾಗುತ್ತಿವೆ? ಅದೂ ವಿಶೇಷವಾಗಿ, ಉತ್ತರ ಕರ್ನಾಟಕ ಅಂದ ತಕ್ಷಣ, ಈ ತರಹವಾದ ವಿಚಾರಗಳು ಏಕೆ ಬರುತ್ತವೆ? ಇದನ್ನು ನಾವು ಪ್ರಮುಖವಾಗಿ ಕೇಳಬೇಕಾಗಿದೆ. ಈ ಯೋಜನೆ ಬಗ್ಗೆ ನಾವು ಇವತ್ತಲ್ಲ ಕೇಳುತ್ತಿರುವುದು. ನಮ್ಮ demand ಇವತ್ತಿನದಲ್ಲ. ಎಂದು ಈ project ಗಳು ಪ್ರಾರಂಭವಾಗಿವೆ, ಅಂದಿನಿಂದ ನಮ್ಮ demand ಇದೆ. ನಾವು ಇದನ್ನು ಇವತ್ತೆ ಪ್ರಶ್ನೆ ಮಾಡುತ್ತಿಲ್ಲ. ಅದಕ್ಕೋಸ್ಕರ ದಯವಿಟ್ಟು ತಾವು ಬರುವುದಕ್ಕಿಂತ ಪೂರ್ವದಲ್ಲಿ ಪ್ರತಿಯೊಂದು ಯೋಜನೆ ಬಗ್ಗೆ ತಾವು ಸರಿಯಾದಂಥ ಮಾಹಿತಿಯನ್ನು ಪಡೆದು ಬಂದು ಸರಿಯಾಗಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಾದರೆ, ಅದು ನಿಜವಾಗಲೂ ಒಂದು ಪ್ರಯೋಜನಕಾರಿಯಾದಂಥ ಒಂದು ಪ್ರಯತ್ನವಾಗುತ್ತದೆ. ಇಲ್ಲದೇ ಇದ್ದರೆ, ಕೇವಲ ಬಂದು ಸತ್ಯಾಗ್ರಹ ಮಾಡುತ್ತಿರುವವರನ್ನು ಎಬ್ಬಿಸಿದರೆ 4 ದಿವಸಕ್ಕೆ ಮತ್ತೆ ಇದಕ್ಕಿಂತ ಉಗ್ರವಾದ ಹೋರಾಟ ಅಲ್ಲಿ ಪ್ರಾರಂಭವಾಗಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ದಯವಿಟ್ಟು ತಾವು ಬರುವುದಕ್ಕಿಂತ ಪೂರ್ವದಲ್ಲಿ ಎಲ್ಲವನ್ನೂ ಅಧ್ಯಯನ ಮಾಡಿ, ಎಲ್ಲವನ್ನೂ ತಾವು ತರಿಸಿ ನೋಡಿ ಉತ್ತರವನ್ನು ಹುಡುಕತಕ್ಕಂಥದ್ದು ಮತ್ತು ಅದನ್ನು ಪರಿಣಾಮಕಾರಿಯಾಗಿ ಶೀಘ್ರದಲ್ಲೇ ಅನುಷ್ಠಾನಕ್ಕೆ ತರುವಂಥ ಪ್ರಯತ್ನ ತಮ್ಮದಾಗಬೇಕು.

ಶ್ರೀ ಎಂ.ಬಿ. ಪಾಟೀಲ್ : ಇದು 'B' scheme ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ, K2 basin ನಲ್ಲಿ ಇವತ್ತು ಸುಮಾರು 7.770 tmc Minor Irrigation allocation ಕೂಡ ಇದೆ. ಸರ್ಕಾರದ Master plan order ಕೂಡ ಇದೆ. ಆ order ಅನ್ನೂ ಕೂಡ ಇವತ್ತಿನ ದಿವಸ ನಾವು ಸಚಿವರಿಗೆ ನೀಡಿದ್ದೇವೆ. 'A' scheme ನಲ್ಲಿ ಇವತ್ತಿನ ದಿವಸ K2 basin ನಲ್ಲಿ ಸುಮಾರು 7.7 tmc ನೀರು ಈ ಯೋಜನೆಗೆ ಆಗಬೇಕು. 'B' scheme ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅದಕ್ಕೆ ಸರ್ಕಾರ ಇವತ್ತಿನ ದಿವಸ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) : ಈಗಾಗಲೇ ನಾನು ಸರ್ಕಾರಕ್ಕೆ ಒಂದು ವಿನಂತಿಯನ್ನು ಮಾಡಿಕೊಂಡಿದ್ದೇನೆ. Scheme 'A' ಜಾರಿಯಲ್ಲಿದೆ. ಆ scheme 'A' ಅಕ್ಕಪಕ್ಕ ಬರತಕ್ಕಂಥ canals ಇವೆ, distributaries ಇವೆ. ಅದರ ಪಕ್ಕಕ್ಕೇ ಕೆರೆಗಳಿವೆ. ಕನಿಷ್ಠ 25% ಕೆರೆಗಳು ಆ canal ಪಕ್ಕಕ್ಕೇ ಇವೆ. ಆದರೆ, Minor Irrigation ನವರು ಅದನ್ನು ನಿರ್ವಹಿಸುತ್ತಾರೆ ಅನ್ನತಕ್ಕಂಥ ಏಕೈಕ ಉದ್ದೇಶದಿಂದ Major Irrigation ನವರು ಆ

projects ಅನ್ನು ತೆಗೆದುಕೊಳ್ಳುತ್ತಿಲ್ಲ, ಕೈಗೆತ್ತಿಕೊಳ್ಳುತ್ತಿಲ್ಲ. ಅದಕ್ಕೆ ನಾವು ಏನಂತಿ ಮಾಡುವುದೇನೆಂದರೆ. Minor Irrigation ನವರನ್ನು request ಮಾಡಿಕೊಂಡು ನೀವು, ಅವರು joint ಆಗಿ effort ಮಾಡಿದರೆ ಆಗುತ್ತದೆ. ಏಕೆಂದರೆ, ಈ ಬಗ್ಗೆ Minor Irrigation ನವರು taks ಎಲ್ಲಾ ಅವರಿಗೇ ಬರುತ್ತವೆಂದು ಒಂದು ತರಹ ಉತ್ತರ ಕೊಡುತ್ತಾರೆ. ನೀವು Major Irrigation ನವರು ಎಲ್ಲಿ canal ಪಕ್ಕಕ್ಕೆ ಬರುತ್ತವೆ, ಅವು gravity ಮೇಲೆ ತುಂಬುತ್ತವೆ. ನೀವೇನೂ link ಮಾಡಬೇಕಾದಂಥ ಅವಶ್ಯಕತೆ ಇಲ್ಲ. At least ಇದಕ್ಕಾದರೂ priority ಕೊಟ್ಟು ತಾವು ಮೊದಲು ಅದನ್ನು pick and choose basis ಮೇಲೆ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) : ನಾನು ಪ್ರಾರಂಭದಲ್ಲೇ ಶುರು ಮಾಡಬೇಕಾದರೆ ಹೇಳಿದೆ. ನಾನು ಉತ್ತರ ಶುರು ಮಾಡಿದ್ದೇ. ಬೆಳಗ್ಗೆಯೇ ನಮ್ಮ ಉಪ ಮುಖ್ಯಮಂತ್ರಿಗಳು ನನಗೆ ತುಂಬಾ ಸ್ಪಷ್ಟವಾಗಿ ಇದನ್ನು ಸಣ್ಣ ನೀರಾವರಿ, ದೊಡ್ಡ ನೀರಾವರಿ ಎಂದು ಯೋಚನೆ ಮಾಡುವ ಪ್ರಶ್ನೆ ಇಲ್ಲ, ಈ ಕಾಮಗಾರಿಯಾಗಬೇಕು, ಈ ದಿಕ್ಕಿನಲ್ಲಿ ನೀವು ಹೋಗಿ ಎಂದು ನನಗೆ ಬೆಳಿಗ್ಗೆಯೇ ಸೂಚನೆ ಕೊಟ್ಟಿದ್ದಾರೆ. ನಾನು ಅದಕ್ಕೋಸ್ಕರವೇ ಇಷ್ಟು ಧೈರ್ಯವಾಗಿ ಹೇಳುತ್ತಿರುವುದು. ತಾವು ಹಿಂದೆ ಸಚಿವರಾಗಿದ್ದಿರಿ. ನಾನು ಅದಕ್ಕೋಸ್ಕರವೇ ಹೇಳುತ್ತಿದ್ದೇನೆ, ಆ ಸಮಸ್ಯೆ ಇವತ್ತಿನದಲ್ಲ. ನೀವು ಹೇಳುತ್ತಿರುವುದು ತುಂಬಾ ಸತ್ಯ. ಇದು ಬಹಳ ವರ್ಷಗಳಿಂದ ಇರುವ ಸಮಸ್ಯೆ. ಅನೇಕ ವರ್ಷಗಳಿಂದ ಯಾರು ಯಾರು ಹೋರಾಟ ಮಾಡಿಕೊಂಡು ಬಂದಿದ್ದರೋ, ಆ ಹೋರಾಟಗಾರರ ಹತ್ತಿರ ನೀವು ಹೇಳಿದಿರಿ, ಸುಮ್ಮನೆ ಬಂದು ಹೋಗುವುದಲ್ಲ. ಇವತ್ತಿನ ತನಕ ನಾನು ಎಲ್ಲೆಲ್ಲಿ ಹೋಗಿದ್ದೇನೋ ಸುಮ್ಮನೆ ಹೋಗಿಲ್ಲ. ಗುತ್ತಿ ಬಸವಣ್ಣಕ್ಕೆ ನಾನು ಸುಮ್ಮನೆ ಹೋಗಿ ಬಂದಿಲ್ಲ. ಆಶ್ವಾಸನೆ ಕೊಟ್ಟು ಬಂದಿದ್ದೇವೆ, ಅದನ್ನು ಈಡೇರಿಸಿದ್ದೇವೆ. ಕಳಸಾ ಬಂಡೂರಿ, ಕೇವಲ ಹೋಗಿ ಬಂದಿಲ್ಲ. ಹೋದೆವು, ಕೆಲಸ ಮಾಡಿಕೊಂಡು ಉದ್ಘಾಟನೆ ಮಾಡಿಕೊಂಡು ಬಂದಿದ್ದೇವೆ. ಈಗಲೂ ಸುಮ್ಮನೆ ಹೋಗುವುದಿಲ್ಲ. ಹೋದಂಥ ಸಂದರ್ಭದಲ್ಲಿ ಯೋಜನೆ ಇಟ್ಟುಕೊಂಡು ಸಣ್ಣ ನೀರಾವರಿ ಮತ್ತು ಭಾರಿ ನೀರಾವರಿ ಇಲಾಖೆ ಅಧಿಕಾರಿಗಳ ಜೊತೆಗೂ ಚರ್ಚೆ ಮಾಡಿ ಎಷ್ಟು ಪಣ ಬೇಕು, ಏನು ಎಂಬ plan ಸಮೇತವೇ ಅಲ್ಲಿಗೆ ಹೋಗಿ ಖಂಡಿತ ಅವರಿಗೆ ಸಮಾಧಾನವಾಗುವ ರೂಪದಲ್ಲಿ ಈ ಒಂದು ಕಾರ್ಯ ಮಾಡಿ ಬರುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಬೇಡ ಅನ್ನುವ ಮಾತನ್ನು ಎಲ್ಲ ಶಾಸಕರ ಮುಖಾಂತರ ಆ ಹೋರಾಟಗಾರರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು, ಅವರು ಇವತ್ತಿನಿಂದ ಅವರ ಧರಣಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಹಂಪನಗೌಡ ಬಾದರ್ಲಿ : ಸಿಂಧನೂರು ಕುಡಿಯುವ ನೀರಿನ ಕೆರೆಯಲ್ಲಿ ಸಂಗ್ರಹಣೆ ಮಾಡತಕ್ಕಂಥ.....

ಶ್ರೀ ಬಿ.ಆರ್. ಪಾಟೀಲ್ : ಬರಗಾಲದ ವಿಷಯವಿದೆ.

ಶ್ರೀ ಹಂಪನಗೌಡ ಬಾದರ್ಲಿ : ಅದರ ಬಗ್ಗೆ ಮಾತನಾಡುವಿರಂತೆ.

(ಅಡಚಣೆ)

ಕುಡಿಯುವ ನೀರಿನ ಕೆರೆ ಇದೆ. ಅದು ಸುಮಾರು ಒಂದು ಲಕ್ಷ ಜನಸಂಖ್ಯೆ ಇರುವಂಥ ಪಟ್ಟಣ. ಆ ಕೆರೆ ಒಡ್ಡು ಕುಸಿದು ಇವತ್ತು 4 ತಿಂಗಳು storage ಮಾಡತಕ್ಕಂಥ.....

ಶ್ರೀ ಬಿ.ಆರ್. ಪಾಟೀಲ್ : ವಿಷಯ ಬೇರೆ ಚರ್ಚೆಯಾಗುತ್ತಿದೆ. ಇನ್ನೂ ವಿಷಯ ಮುಕ್ತಾಯವಾಗಿಲ್ಲ. ನಾನು ಅಧ್ಯಕ್ಷರ ಅಪ್ಪಣೆ ಕೋರುತ್ತಿದ್ದೇನೆ.

(ಅಡಚಣೆ)

ಶ್ರೀ ಹಂಪನಗೌಡ ಬಾದರ್ಲಿ : ನಾನು ಬೆಳಗ್ಗೆಯೇ ಹೋಗಿ ಅಧ್ಯಕ್ಷರನ್ನು ಭೇಟಿ ಮಾಡಿ.....

(ಅಡಚಣೆ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಏಕೆ ಈ ತರಹ ನೀವು ನೀವೇ ಮಾಡುತ್ತಿದ್ದೀರಿ?

ಶ್ರೀ ಬಿ.ಆರ್. ಪಾಟೀಲ್ : ಸಾರ್, ನಾನು ನಿಮ್ಮ ಅಪ್ಪಣೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಅಪ್ಪಣೆ ಕೇಳುತ್ತಿದ್ದೀರಿ. ಅವರು ಅಪ್ಪಣೆ ಪಡೆದುಕೊಂಡಿದ್ದಾರೆ. ಕುಳಿತುಕೊಳ್ಳಿ. ಅದು ಬೇರೆ issue.

ಶ್ರೀ ಬಿ.ಆರ್. ಪಾಟೀಲ್ : ನಾನು ಆ issue ಬಗ್ಗೆಯೇ ಮಾತನಾಡಬೇಕಾಗಿದೆ. ನನ್ನದು ಬೇರೆ ವಿಷಯವೇನಿಲ್ಲ. ನನಗೆ ಅದೇ ವಿಷಯದ ಬಗ್ಗೆ ಮಾತನಾಡಬೇಕಾಗಿದೆ. ಸಣ್ಣ ನೀರಾವರಿ ಸಚಿವರು, ಉಪ ಮುಖ್ಯಮಂತ್ರಿಗಳೂ ಕೂಡ ಇಲ್ಲಿದ್ದಾರೆ.

ಅಧ್ಯಕ್ಷರು : ಅದಾದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಕುಳಿತುಕೊಳ್ಳಿ.

ಶ್ರೀ ಬಿ.ಆರ್. ಪಾಟೀಲ್ : ಈ ತರಹ ನೀವು ನಮಗೆ ನಿರಾಸೆ ಮಾಡಿದರೆ, ಈ ಉತ್ತರ ಕರ್ನಾಟಕದ ಬಹಳ ಮುಖ್ಯವಾದ.....

ಶ್ರೀ ಹಂಪನಗೌಡ ಬಾದರ್ಲಿ : ಪಾಟೀಲರೆ, ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸುಮ್ಮನೆ ಹೇಳಬೇಕೆಂದು ಹೇಳುತ್ತಿದ್ದೀರಿ. ಖಂಡಿತ ನಾವು ಕೊಟ್ಟಿದ್ದೇವೆ. ಇನ್ನೂ ಕೊಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ : ವಿಷಯ ಚರ್ಚೆಗೆ ಬಂದಿದ್ದರಿಂದ ನಾನು ಸಾಂದರ್ಭಿಕವಾಗಿ ಹೇಳುತ್ತಿದ್ದೇನೆ. ಅಪ್ಪಣೆ ಕೊಟ್ಟರೆ ಮಾತನಾಡುತ್ತೇನೆ. ಇಲ್ಲದಿದ್ದರೆ ಇಲ್ಲ.

(ಆ) ವಿಷಯ : ಸಿಂಧನೂರು ಕುಡಿಯುವ ನೀರಿನ ಕೆರೆ ನಿರ್ಮಾಣದ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಸಿಂಧನೂರು ಕುಡಿಯುವ ನೀರಿನ ಕೆರೆ ಸುಮಾರು 4 ತಿಂಗಳು storage ಇರತಕ್ಕಂಥ ಕೆರೆ. ಆ ಕೆರೆಯ ಒಂದು ಭಾಗ ಬಂಡು ಕುಸಿದು ಈಗ ಆ ಕೆರೆಯಲ್ಲಿ ನೀರು ನಿಲ್ಲಲಾರದ ಪರಿಸ್ಥಿತಿಯಾಗಿದೆ. ಈಗಾಗಲೇ ಮಾನ್ಯ